ನಡವಳಿಕೆ ಏಕೋ ರಸಹೀನವೆನಿಸಿ, ಸಿನಿಕನಾದ ಅವನನ್ನು ಮದುವೆಯಾಗುವುದರಲ್ಲಿ ಆಸಕ್ತಿ ಬತ್ತಿ, ಕಡೆಗೆ ತಂದೆ ತಾಯಿ ಗೊತ್ತುಮಾಡಿದ ಇನ್ನಾರನ್ನೋ ವಿರೋಧಿಸದೆ ಮದುವೆಯಾಗಿದ್ದಳು.

ಹುಡುಗ ಒಳ್ಳೆಯವನು ಎಂದು ತಾಯಿ ಹೇಳಿದ್ದು, ವಿದ್ಯಾವಂತ ಇನ್ನೂ ಏನೇನೋ ಗುಣಗಳ ಪಟ್ಟಿಯನ್ನು ಅಪ್ಪ ಎದುರಿಗಿಟ್ಟಿದ್ದು, ಅವಳು ಗೋಣು ಆಡಿಸಿದ್ದು ನೆನಪಾಯಿತು. ಸದಾ ಹಿಂದೆ ಮುಂದೆ ಮೆತ್ತಿಕೊಂಡು ತಿರುಗುವ, ಅಸಹ್ಯ ಸೋರುವಷ್ಟು ಪ್ರೀತಿ ತೋರಿಸುವ ಅವನನ್ನು ಕಂಡರೆ ಅವಳಿಗೇನೋ ಒಂಥರಾ ರೇಜಿಗೆ. ಕೋಪವೇ ಬಾರದ ಅವನ ಕಪಾಳಕ್ಕೆ ಎರಡು ಬಿಗಿದು ಅಳಿಸುವಾಸೆ. ತಾನು ಹುಸಿಗೋಪ ನಟಿಸಿ ಮುಸುಕೆಳೆದು ಮಲಗಿದಾಗ ಅವನೂ ಹಾಗೇ ನಟಿಸಿದ್ದರೆ ಅವಳಿಗೆ ಹಾಯೆನಿಸುತ್ತದೆ. ಇನ್ನೂ ಮುಂದಕ್ಕೆ ನಾಟಕ ಆಡುವ ಸರದಿ ಅವಳಿಗೆ ಬೇಕು, ಅವನ ಕೋಪವನ್ನು ಕರಗಿಸಿ ತನ್ನಲ್ಲಿ ಒಂದಾಗಿಸಿ ಲಲ್ಲೆಗರೆಯುವ ಆಸೆ. ಆದರೆ ಅವಳ ಬಯಕೆಯನ್ನು ಬೋರಲಾಗಿಸುವಂತೆ ಅವನೇ ಬಂದು ಗೋಗರೆಯುತ್ತಾನೆ, ಸಮಾಧಾನಿಸುತ್ತಾನೆ. ಈಗ ಅವಳ ಕೋಪ ನಿಜವಾಗಿ ಸ್ಫೋಟಿಸಿ ಅವನನ್ನು ಒರಟಾಗಿ ತಳ್ಳಿ ದೂರಾಗುತ್ತಾಳೆ. ಅವಳ ತಿಕ್ಕಲುತನದ ವರ್ತನೆ ಕಂಡು ಅವನು ಬೆಪ್ಪಾಗುತ್ತಾನೆ.

ದಿನಗಳೆದಂತೆ ಅವಳ ಮನಸ್ಸಿನ ಪದರ ಪದರಗಳು ಅವನ ಮುಂದೆ ಕ್ರಮೇಣ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಅವಳ ಅತೃಪ್ತ – ಅಯೋಮಯ ಯೋಚನೆಗಳು ಧಿಗ್ಗನೆದ್ದು ಕುಣಿಯುತ್ತವೆ. ಅಕಾರಣವಾಗಿ ದುಃಖ ನುಗ್ಗಿ ಬರುತ್ತದೆ. ದಿಂಬಿಗೆ ಮುಖವೊತ್ತಿ ಮುಸುಮುಸು ಅಳುತ್ತಾಳೆ. ರಾತ್ರಿ ಅವನಿಂದ ದೂರ ಉರುಳಿಕೊಂಡು ತನ್ನ ತೀರದ ಆಸೆಗಾಗಿ ಮುಸುಕಿನಲ್ಲೇ ಬಿಕ್ಕಳಿಸುತ್ತಾಳೆ. ಬರುಬರುತ್ತ ಇವಳ ಹುಚ್ಚಾಟ ಹೆಚ್ಚಾಗಿ ಅವನಿಗೂ ಬಿಸಿ ತಗುಲಿತು. ಅವಳು ಬದಲಾಗುವ ಲಕ್ಷಣ ಕಾಣಲಿಲ್ಲ. ಒಂದೇ ಮನೆಯಲ್ಲಿ ಅಪರಿಚಿತರಂತಾದರು.

ಅವಳ ವ್ಯಸ್ತ ಮನಸ್ಸು ಕಿಚ್ಚೆದ್ದಿತ್ತು. ಈ ದಿನ ಗಂಡ ಮನೆಯಲ್ಲಿರುತ್ತಾನೆಂಬ ಭಾವನೆಯೇ ಅವಳನ್ನು ಮನೆಯಿಂದ ಆಚೆ ದಬ್ಬಿದೆ. ರಸ್ತೆಯ ರಿಪೇರಿಯಿಂದಾಗಿ ಇನ್ನೊಂದು ಸುತ್ತು ಹೆಚ್ಚಾಯಿತು. ಅಸಹನೆ ಏರುತ್ತಿತ್ತು. ದಾರಿಯ ಮಧ್ಯಕ್ಕೆ ಕೆಂಪು ಬಾವುಟ ಕಟ್ಟಿ, ಪಿಕಾಸಿ, ಗುದ್ದಲಿಯಿಂದ ನೆಲವನ್ನು ಬಗೆಯುತ್ತಿದ್ದಾರೆ, ಎಷ್ಟು ನಿಷ್ಕರುಣೆಗಳು ...ಜೋರಿನ ಪೆಟ್ಟುಗಳು, ಹೆಕ್ಕಳಿಕೆ ಹೆಕ್ಕಳಿಕೆಗಳು ಕಿತ್ತು ಬರುತ್ತಿವೆ... ಆಶ್ಚರ್ಯ! ರಸ್ತೆಯೊಡಲಿಂದ ರಕ್ತ ಒಸರುತ್ತಿಲ್ಲ, ನಿಟ್ಟುಸಿರು ಏಳುತ್ತಿಲ್ಲ. ಹಾಗೇ ದೃಷ್ಟಿ ಕದಲುತ್ತದೆ.

ಗುದ್ದಲಿ ಹಿಡಿದವನ ಹೊಳೆಯುವ ಕಪ್ಪುಮೀನಖಂಡಗಳಲ್ಲಿ ಬೆವರು. ಹೆಜ್ಜೆ ಎತ್ತದೆ ಪರವಶಳಾಗಿ ಅವನ ತುಂಬಿದ ಪುಷ್ಟ ಎದೆಯನ್ನೇ ದಿಟ್ಟಿಸುತ್ತಾಳೆ. ಉಸಿರಿನ ಏರಿಳಿತದಿಂದ ಅವನ ರೋಮಭರಿತ ಎದೆ ಉಬ್ಬುಬ್ಬಿ ಇಳಿಯುತ್ತದೆ. ತುಂಡು ಬಟ್ಟೆಯೊಂದು ಅಡ್ಡಡ್ಡವಾಗಿ ಅವನ ಮೊಣಕಾಲಿನಿಂದ ಸೊಂಟದವರೆಗೂ ಬಿಗಿಯಾಗಿ ತಬ್ಬಿದೆ. ಅವನ ಬಲಿಷ್ಠ ಕಾಲ ಹಿಮ್ಮಡಿಯನ್ನೇ ಅವಳ ದೃಷ್ಟಿ ನುಂಗುತ್ತಿರುವಾಗ ಅವನ ಕಾಲ ಬುಡದಲ್ಲಿ ರಾಶಿ ರಾಶಿಯಾಗಿ ಬಿದಿದ್ದ ನೆಲದ ಬಸಿರನ್ನು ಕಂಡು ಅವಳ ಬಸಿರು ಹುಚ್ಚೆದ್ದ ಆವೇಶದಲ್ಲಿ ಕುಣಿಯುತ್ತದೆ. ಕರುಳುಗಳ ಹೊಸೆದಾಡುವ ಅನುಭವ ತೀವ್ರವಾಗಿ ಅಲ್ಲಿ ನಿಲ್ಲಲಾಗದೆ ವಿಚಿತ್ರ ತಳಮಳದಿಂದ ಹೆಜ್ಜೆ ಕೀಳುತ್ತಾಳೆ.

ಅಬ್ಬಾ..ಎಷ್ಟೊಂದು ಜನ! ಕೆಲಸದಲ್ಲಿ ತೊಡಗಿದ್ದಾರೆ...ರಿಪೇರಿ ಕೆಲಸಗಳು!... ಯಾರೋ ಅಗೆದ ನೆಲವನ್ನು ಮತ್ಯಾರೋ ತುಂಬಿಸಿ ಸರಿ ಮಾಡುತ್ತಿದ್ದಾರೆ! ತಾನೂ ಒಳಗಣ ಕೊರಕಲನ್ನು ತುಂಬಿಸಿ, ಹಳ್ಳವಾಗದಂತೆ ದಪ್ಪಗೆ ಏನಾದರೂ ಬಳಿಯಬೇಕು. ಐಬು ಕಾಣದಂತೆ. ನುಣುಪಾಗಿ, ಇನ್ನೆಂದೂ ನೆಗ್ಗಿ ಹೋಗದ ಹಾಗೇ, ಬಿರುಕು ಬಿಡದ ಹಾಗೆ ಸಪಾಟು ಮಾಡಲು ಮನ ಉದ್ಯುಕ್ತವಾಗುತ್ತದೆ. ತನ್ನ ದೃಷ್ಟಿಯನ್ನು ಅವಳು ಹರಿತಗೊಳಿಸಿದಂತೆ ದೃಷ್ಟಿ ತೂರುವವರೆಗೂ ತೂರಿಸಿದಳು. ಉದ್ದನೆಯ ರಸ್ತೆಯುದ್ದಕ್ಕೂ ಅಲ್ಲಲ್ಲಿ ಸಣ್ಣ, ದೊಡ್ಡ, ಅಗಲವಾದ ಡೊಗರುಗಳೋ ಡೊಗರುಗಳು... ತನ್ನ ಕಣ್ಣನ್ನು ದಾಟಿದ, ಇನೂ ಉದ್ದನೆಯ ರಸ್ತೆಗುಂಟ ಇದರಂತೆ ಇನ್ನೆಷ್ಟು ಹಳ್ಳ-ಕೊಳ್ಳಗಳೋ, ಕೊರಕಲು-ಗುಂಡಿಗಳೋ ಎನಿಸಿ ಉಸಿರು ತಿದಿಯಾಗುತ್ತದೆ.

ಅವಳ ತೆರೆದ ಕಣ್ಣ ಹಾಸೊಳಗೆ, ಚಿಂದಿ ಹರಿದು ಬಿದ್ದಿದ್ದ ರಸ್ತೆಯ ಹಳ್ಳ-ತೂತುಗಳು ದೊಡ್ಡದು ದೊಡ್ಡದಾಗುತ್ತ, ಒಂದು ಹತ್ತು, ಹತ್ತು ನೂರಾಗುತ್ತ, ಬರೀ ಡೊಗರುಗಳೇ ವ್ಯಾಪಿಸುತ್ತ... ಬೆಳೆಯುತ್ತ... ಬರಬರುತ್ತ ಅವೆಲ್ಲ ಒಂದಾಗಿ ದೊಡ್ಡ ಕಂದರವಾಗುತ್ತಿರುವಂತೆ ಭಾಸವಾಗುತ್ತದೆ. ●